
# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 15  Reg. No. : KARBIL / 2005 / 16123  ಫೆಬ್ರವರಿ - 2026  ಪುಟ : 8  ದರ ₹ 3-00  ವಾರ್ಷಿಕ ಚಂದಾ ₹ 30-00  ಸಂಚಿಕೆ : 02  ಪ್ರಕಟಣೆ : 28-02-2026

## ಸೇವೆಯನ್ನೇ ಉಸಿರಾಗಿಸಿಕೊಂಡ ಶ್ರೀಮತಿ ಸುಮಂಗಲಾ ಪ್ರಭಾಕರ್



ಶ್ರೀಮತಿ ಸುಮಂಗಲಾ ಪ್ರಭಾಕರ್ ಇವರು ದಿ| ಪಿ. ಎಸ್. ಪ್ರಭಾಕರ್ ಅವರ ಪತ್ನಿಯಾಗಿದ್ದು, ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 15 ವರ್ಷಕ್ಕೂ ಅಧಿಕ ಕಾಲ ನಿರ್ದೇಶಕಿಯಾಗಿ, ಈಗ 2ನೇ ಅವಧಿಗೆ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸುಬ್ರಹ್ಮಣ್ಯ ಸಭಾದ ವಜ್ರಮಹೋತ್ಸವದ ಸಮಯದಲ್ಲಿ ಮಹಿಳಾ ವೇದಿಕೆಯ ಕೋಶಾಧಿಕಾರಿಯಾಗಿ ಕಾರ್ಯನಿರ್ವಹಿಸಿ, ತಮ್ಮ ಸಂಘಟನಾ ಸಾಮರ್ಥ್ಯವನ್ನು ಪರಿಚಯಿಸಿದ್ದಾರೆ. ಸುಬ್ರಹ್ಮಣ್ಯ ಸಭಾ ತನ್ನ ಶತಮಾನೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಸಮಿತಿಯ ಜತೆ ಕಾರ್ಯದರ್ಶಿಯಾಗಿ ಶತಮಾನೋತ್ಸವದ ಯಶಸ್ಸಿಗೆ ತಮ್ಮದೇ ಆದ ಕೊಡುಗೆಯನ್ನಿತ್ತಿದ್ದರು. ಪ್ರಸ್ತುತ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷ ಸ್ಥಾನದ ಕೆಲಸದ ಜೊತೆ ಶ್ರೀ ಸುಬ್ರಹ್ಮಣ್ಯ ಸಭಾದ ಪ್ರತಿಷ್ಠಿತ ಅಂಗಸಂಸ್ಥೆಯಾದ ಶ್ರೀ ಶಿವಸದನ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷೆಯಾಗಿ ಶಿವಸದನದ ಹಿರಿಯ ನಾಗರಿಕ ವಸತಿಗೃಹ ಮತ್ತು ವಿಶೇಷ ಚೇತನ ಮಕ್ಕಳಿಗಾಗಿ ಇರುವ ಶಾಲೆಯ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಇವರ ದಕ್ಷ ಆಡಳಿತದಲ್ಲಿ 'ಶಿವಸದನ' ಸುಭದ್ರವಾಗಿ ನಿವಾಸಿಗಳ ಎಲ್ಲಾ ಬೇಡಿಕೆಗಳಿಗೆ, ದಿನನಿತ್ಯದ ಅಗತ್ಯತೆಗಳಿಗೆ ಪೂರಕವಾಗಿ ಸ್ಪಂದಿಸುತ್ತಾ ಬೆಳೆಯುತ್ತಿದೆ. ತಮ್ಮ ನಿಸ್ವಾರ್ಥಸೇವೆ ಮತ್ತು ಪ್ರೀತಿಯ ಒಡನಾಟದಿಂದ ಶಿವಸದನದ ನಿವಾಸಿಗಳ ಮನವನ್ನು ಗೆಲ್ಲುವುದರಲ್ಲಿ ಯಶಸ್ವಿಯಾಗಿದ್ದಾರೆ.

ಶ್ರೀಮತಿ ಸುಮಂಗಲಾ ಪ್ರಭಾಕರ್ ತಮ್ಮ ಪತಿಯ ಜೊತೆ ಮಂಗಳೂರಿನ ಲಯನ್ಸ್ ಕ್ಲಬ್‌ನಲ್ಲಿಯೂ 45 ವರ್ಷ ಕೆಲಸ ಮಾಡಿ ಡಿಸ್ಟ್ರಿಕ್ಟ್ ಲಯನೆಸ್ ಪ್ರೆಸಿಡೆಂಟ್ ಹುದ್ದೆಗೆ ಏರಿ ತಮ್ಮ ಕಾರ್ಯಕ್ಷಮತೆಯನ್ನೂ ತೋರಿದ್ದಾರೆ. ಇಂತಹ ನಿಸ್ವಾರ್ಥಿ, ಸಾಮಾಜಿಕ ಕಳಕಳಿಯನ್ನು ತನ್ನ ಜೀವನದಲ್ಲಿ ಉಸಿರಾಗಿಸಿಕೊಂಡು, ತಮ್ಮ ಬದುಕಿನ ಬಹುಭಾಗವನ್ನು ಸಮಾಜದ ಸೇವೆಗಾಗಿ ಮುಡಿಪಾಗಿಟ್ಟ ಶ್ರೀಮತಿ ಸುಮಂಗಲಾ ಪ್ರಭಾಕರ್ ಇವರನ್ನು ನಮ್ಮ 19 ಸ್ಥಾನಿಕ ಸಂಘಗಳ ಒಕ್ಕೂಟವಾದ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಪುತ್ತೂರಿನಲ್ಲಿ ದಿನಾಂಕ 25-01-2026ರಂದು ನಡೆದ ತನ್ನ 6ನೇ ಸ್ಥಾನಿಕ ಬ್ರಾಹ್ಮಣ ಸಮಾವೇಶ - 2026 ಇಲ್ಲಿ ಗುರುತಿಸಿ, ಶಾಲು ಹೊದಿಸಿ, ಫಲಪುಷ್ಪ ಮತ್ತು ಪ್ರಶಸ್ತಿ ಪತ್ರವನ್ನಿತ್ತು, ನೆರೆದ ಎಲ್ಲಾ ಸಮಾಜ ಬಾಂಧವರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು. ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರಿನ ಹೆಮ್ಮೆಯ ಸದಸ್ಯೆ ಹಾಗೂ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಇವರಿಗೆ ನೀಡಿದ ಈ ಗೌರವಕ್ಕೆ ಸುಬ್ರಹ್ಮಣ್ಯ ಸಭೆಯ ಆಡಳಿತ ಮಂಡಳಿ, ಪದಾಧಿಕಾರಿಗಳು ಮತ್ತು ಸರ್ವಸದಸ್ಯರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

– ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

## ಶ್ರೀಮತಿ ಅರುಣಾ ಸೋಮಶೇಖರ್ ನಿರ್ದೇಶನದಲ್ಲಿ 'ಶಿವಶಕ್ತಿ' ನೃತ್ಯರೂಪಕ




ತಾರೀಕು 24, 25ನೇ ಫೆಬ್ರವರಿಯಲ್ಲಿ ಪುತ್ತೂರಿನಲ್ಲಿ ನಡೆದ ಜಾಗತಿಕ ಸ್ಥಾನಿಕ ಸಮಾವೇಶದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಪದಾಧಿಕಾರಿಗಳು, ನಿರ್ದೇಶಕರು, ಮಹಿಳಾ ವೇದಿಕೆ, ಯುವ ವೇದಿಕೆ ಪದಾಧಿಕಾರಿಗಳು ಮತ್ತು ಸದಸ್ಯರು ಎರಡೂ ದಿನ ಸಕ್ರಿಯವಾಗಿ ಭಾಗವಹಿಸಿದರು. ರವಿವಾರ ಶ್ರೀ ಸುಬ್ರಹ್ಮಣ್ಯ ಸಭಾದ 30 ಜನ 'ಸದನದ ಕಲಾವಿದರು' ಶ್ರೀಮತಿ ಅರುಣಾ ಸೋಮಶೇಖರ್ ನಿರ್ದೇಶನದಲ್ಲಿ ಪ್ರಸ್ತುತಪಡಿಸಿದ 'ಶಿವಶಕ್ತಿ' ಎಂಬ ನೃತ್ಯರೂಪಕ ಸರ್ವರ ಮೆಚ್ಚುಗೆಗೆ ಪಾತ್ರವಾಯಿತು.

ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ, ಮುಲ್ಲಡ್ಕ
ಅಂಚೆ : ಮುಂಡ್ಕೂರು, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ - 576 121



ಮುಂಡ್ಕೂರಿನ ಶ್ರೀ ಅನ್ನಪೂರ್ಣೇಶ್ವರಿ ದೇವಾಲಯದ ಜೀರ್ಣೋದ್ಧಾರ ಕಾರ್ಯ ನಡೆಯುತ್ತಿದೆ.
ಈ ಪವಿತ್ರ ಕಾರ್ಯಕ್ಕೆ ಭಗವದ್ಭಕ್ತರಾದ ತಾವೆಲ್ಲರೂ ಉದಾರವಾಗಿ ಧನಸಹಾಯವಿತ್ತು ಸಹಕರಿಸಬೇಕೆಂದು ವಿನಮ್ರ ವಿನಂತಿ.

Bank A/C. Details :
Canara Bank Mundkur,
Sri Annapoorneshwari Temple
S.B. A/c. - 01462200004068.
IFSC No. CNRB0010146
UPI ID : 8722280918@CNRB

ವಿವರಗಳಿಗೆ ಸಂಪರ್ಕಿಸಿ
Govindaraja - 9980920013
B.V. Rao - 9880201725



# ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ

• ರಘುವೀರ್ ಪೆರ್ಡೂರು • ಟಿ.ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.
• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 ✆ : 9343361618 e-mail : jnanashakthisss@gmail.com


## ಅನುಗ್ರಹ ಸಂದೇಶ



ಜೀವಿಯು ತನ್ನ ಪೂರ್ವಜನ್ಮದಲ್ಲಿ ಆಚರಿಸಿರಬಹುದಾದ ಪಾಪ ಅಥವಾ ಪುಣ್ಯಕರ್ಮಗಳಿಗೆ ಅನುಸಾರವಾಗಿ ಪ್ರಸ್ತುತ ಜನ್ಮದಲ್ಲಿ ದುಃಖ ಅಥವಾ ಸುಖವನ್ನು ಅನುಭವಿಸುವನು ಎಂದು ಶಾಸ್ತ್ರಗಳು ತಿಳಿಸುತ್ತವೆ.

ಲೌಕಿಕ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಪ್ರತಿದಿನವೂ ಎಲ್ಲರೂ ಅನುಸರಿಸಬೇಕಾದ ಸರಿಯಾದ ಮಾರ್ಗ ಯಾವುದು? ಜೀವಿಸುವ ಮಾರ್ಗ ಯಾವುದು? ಎಂಬ ವಿವೇಚನ ಜ್ಞಾನವನ್ನೂ ಶಾಸ್ತ್ರಗಳು ತಿಳಿಸುತ್ತವೆ. ಈ ಮಾರ್ಗದರ್ಶನವು ಯಾವುದೇ ಸಂದರ್ಭದಲ್ಲಿ ವ್ಯಕ್ತಿಯು ಸರಿಯಾದ ಮಾರ್ಗವನ್ನು ಅನುಸರಿಸಲು ಸಹಾಯವನ್ನು ಮಾಡುವುದು.

ಕಾಯೇನ, ವಾಚಾ, ಮನಸಾ ಸಾತ್ವಿಕ ಚಟುವಟಿಕೆಗಳಲ್ಲಿ ತೊಡಗಬಹುದಾದ ಮಾರ್ಗದರ್ಶನವನ್ನು ಶ್ರೀಮದ್‌ಭಗವದ್ಗೀತೆಯಲ್ಲಿ ವಿವರವಾಗಿ ತಿಳಿಸಲಾಗಿದೆ. ಇವುಗಳನ್ನು ತ್ರಿಕರಣಕೂಪದ ತಪಸ್ಸು ಎಂದು ಭಗವಂತನು ತಿಳಿಸಿದ್ದಾನೆ.

*ದೇವ-ದ್ವಿಜ-ಗುರು-ಪ್ರಾಜ್ಞ-ಪೂಜನಂ ಶೌಚಮಾರ್ಜನಮ್ ।*
*ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ ॥*

ದೈವಭಕ್ತಿ, ಬ್ರಾಹ್ಮಣರು, ಗುರು ಹಾಗೂ ಪ್ರಾಜ್ಞರಲ್ಲಿ ಗೌರವವನ್ನು ತೋರಿಸಬೇಕು. ಶೌಚ, ಸರಳತೆ, ಬ್ರಹ್ಮಚರ್ಯೆ ಇವುಗಳು ದೈಹಿಕ ತಪಸ್ಸು ಎಂದು ಕರೆಯಲ್ಪಡುತ್ತವೆ. ಇತರರನ್ನು ನೋಯಿಸದ, ಸತ್ಯವಾದ ಮಾತುಗಳು ವಾಚಿಕ ತಪಸ್ಸು.

*ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯ-ಹಿತಂ ಚ ಯತ್ ।*
*ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ?*

ಸ್ವಸ್ಥಮನಸ್ಸು, ಸೌಮ್ಯವಾದ ನಡೆನುಡಿ, ಸಂಯಮ ಹಾಗೂ ಭಾವಶುದ್ಧಿ ಇವುಗಳು ಮಾನಸಿಕ ತಪಸ್ಸು.

*ಮನಃ ಪ್ರಸಾದಃ ಸೌಮ್ಯತ್ವಂ ಮೌನಮಾತ್ಮ-ವಿನಿಗ್ರಹಃ ।*
*ಭಾವ-ಸಂಶುದ್ಧಿರಿತ್ಯೇತತ್ತ ಮಾನಸಮುಚ್ಯತೇ ?*

ಕಾಯೇನ, ವಾಚಾ, ಮನಸಾ ಆಚರಿಸಿದ ನಿಷಿದ್ಧ ಅಥವಾ ಅನುಮೋದಿಸಲ್ಪಟ್ಟ ಕರ್ಮಗಳ ಫಲಗಳನ್ನು ಸೂಕ್ತಕಾಲದಲ್ಲಿ ಅದೇ ತ್ರಿಕರಣಗಳ ಮೂಲಕವಾಗಿಯೇ ಅನುಭವಿಸಬೇಕಾಗುತ್ತದೆ ಎಂದು ಜಗದ್ಗುರು ಶ್ರೀ ಶಂಕರಭಗವತ್ಪಾದರು ವಿವರಿಸಿದ್ದಾರೆ.

## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'

### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 60ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದುಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ 7-00ರಿಂದ ಸಂಜೆ ಗಂಟೆ 7-00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿಗಾಗಿ** →

ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598

**'ಶಿವಸದನ' ಹಿರಿಯ ನಾಗರಿಕರ ವಸತಿನಿಲಯದಲ್ಲಿ ಸಂತೃಪ್ತ ಜೀವನ ಸಾಗಿಸುತ್ತಿರುವ ಶ್ರೀ ಸುಬ್ರಾಯ ಭಟ್ ಅವರ 90ನೇ ಹುಟ್ಟುಹಬ್ಬವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಸಂಭ್ರಮಿಸಲಾಯಿತು.**




*Prop. : P. Srikanth Rao* Mobile : 9343361618

**M/s. SAMARPAN**

**HOUSE OF STATIONERY**



"Vijaya Nivas", Opp. Pio Mall
Bejai Church Road, Mangalore - 4

ಪತ್ರಿಕೆಗೆ ಶುಭ ಬಯಸುವ– ಮೊಬೈಲ್ : 9972989678
9448104174

**ರವಿಕಿರಣ್ ಕ್ಯೊಲ,** ಬಿ.ಎ., ಎಲ್ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್ ಹಾಗೂ**
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

1963-2026
**RAJESH POWER PRESS**
PRINTERS & PUBLISHERS
DARBE - 574 202, PUTTUR, D. K., Karnataka
✆ : (08251) 231696 / 9448481696
Email : putturrajeshpress@gmail.com

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ವತಿಯಿಂದ ದೇಣಿಗೆ



ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ವತಿಯಿಂದ ಸಮಾವೇಶ ಪ್ರಯುಕ್ತ ರೂ. 1,00,000/- (ರೂಪ್ಯಾ ಒಂದು ಲಕ್ಷ) ದೇಣಿಗೆಯನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಇವರಿಗೆ ಹಸ್ತಾಂತರ ಮಾಡಲಾಯಿತು. ಎರಡೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಸಮಾಜ ಸೇವಕ, ಶಿಕ್ಷಣಪ್ರೇಮಿ
## ಶ್ರೀ ಕೆ. ಪದ್ಮನಾಭ ಶಾನ್‌ಭಾಗ್ ಅವರಿಗೆ 'ಕನ್ನಡರತ್ನ' ಪ್ರಶಸ್ತಿ



ರಾಜ್ಯದಾದ್ಯಂತ ಸರ್ಕಾರಿ ಕನ್ನಡ ಶಾಲೆಗಳ ಉಳಿವು ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ 'ಕನ್ನಡ ಶಾಲೆ ಉಳಿಸಿ–ಬೆಳೆಸಿ ಅಭಿಯಾನ'ದ ವತಿಯಿಂದ ನೀಡಲಾಗುವ ಪ್ರತಿಷ್ಠಿತ 'ಕನ್ನಡರತ್ನ' ಪ್ರಶಸ್ತಿಯನ್ನು ಫೆಬ್ರವರಿ 11ರಂದು ಮಂಗಳೂರು ಪುರಭವನದಲ್ಲಿ ಸಮಾಜ ಸೇವಕರು ಹಾಗೂ ಶಿಕ್ಷಣಪ್ರೇಮಿ ಶ್ರೀ ಕೆ. ಪದ್ಮನಾಭ ಶಾನ್‌ಭಾಗ್ ಇವರಿಗೆ ಪ್ರದಾನ ಮಾಡಲಾಯಿತು. ಇವರು ಕಳೆದ ಹಲವು ವರ್ಷಗಳಿಂದ ಎಲೆಮರೆಕಾಯಿಯಂತೆ ಸಮಾಜಸೇವೆಯಲ್ಲಿ ತೊಡಗಿಸಿ ಕೊಂಡಿದ್ದಾರೆ. ವಿಶೇಷವಾಗಿ ಶಿಕ್ಷಣ ಕ್ಷೇತ್ರಕ್ಕೆ ಇವರು ನೀಡುತ್ತಿರುವ ಕೊಡುಗೆ ಅಪಾರವಾದುದು. ಸರ್ಕಾರಿ ಶಾಲೆಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಅಗತ್ಯವಾದ ಪೀಠೋಪಕರಣ ಹಾಗೂ ಕಟ್ಟಡ ನಿರ್ಮಾಣದಂತಹ ಕಾರ್ಯಗಳಿಗೆ ಇವರು ಉದಾರವಾಗಿ ದಾನ ನೀಡುವ ಮೂಲಕ ತಮ್ಮ ಶಿಕ್ಷಣ ಪ್ರೇಮವನ್ನು ಮೆರೆದಿದ್ದಾರೆ.

ಕನ್ನಡ ಶಾಲೆಗಳ ಸಬಲೀಕರಣಕ್ಕಾಗಿ ಇವರು ತೋರಿರುವ ಕಾಳಜಿ ಮತ್ತು ನಿಸ್ವಾರ್ಥ ಸಮಾಜ ಸೇವೆಯನ್ನು ಪರಿಗಣಿಸಿ, ಅವರನ್ನು ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ.

ಪತ್ರಿಕೆಗೆ ಶುಭ ಬಯಸುವ –

**ಉದಯಾದ್ರಿ ಕೆಟರರ್ಸ್**

ಉಮಾಮಹೇಶ್ವರ ಉದಯಾದ್ರಿ ಮಠ
ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಬಳಿ
'ಅಂಗೀರಸ', ಪಡುಬಿದ್ರಿ, ಉಡುಪಿ ಜಿಲ್ಲೆ

ಪ್ರೊ.: ನಯನಾಭಿರಾಮ ಸ್ವಾಮಿ
✆ : 9449101303 / 9632500864

ಮದುವೆ ಇನ್ನಿತರ ಸಮಾರಂಭಗಳಿಗೆ ಶುಚಿರುಚಿಯಾದ ಅಡುಗೆ ಮಾಡಿಕೊಡಲಾಗುವುದು. ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು ಇತರ ವೈದಿಕ ಕಾರ್ಯಕ್ರಮಗಳನ್ನು ನಡೆಸಿಕೊಡಲಾಗುವುದು.

ಸಮಾಜ ಬಾಂಧವರು ಸದುಪಯೋಗಪಡಿಸಿಕೊಳ್ಳಬಹುದು.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ಧ್ರುವ್**

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

**ಶಾಖೆಗಳು** ✆ : 9880968032 / 0824-2982095

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575
ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967
ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ ✆ : 9741443470
ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು ✆ : 9740925733
ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು ✆ : 9945916755
ಕುಲಶೇಖರ : ಅಕಯ್ದ ಕಾಂಪ್ಲೆಕ್ಸ್, ಶಕ್ತಿನಗರ ಅಡ್ಡ ರಸ್ತೆ ಲ್ಯೂಮಿನಸ್ ಅಪಾರ್ಟ್‌ಮೆಂಟ್ ಬಳಿ, ಪದವು, ಕುಲಶೇಖರ, ಮಂಗಳೂರು ✆ : 8904801404
ಮುಲ್ಕಿ : ಮಾತಾ ರೆಸಿಡೆನ್ಸಿ, ಹಳೆಯಂಗಡಿ, ಮುಲ್ಕಿ ✆ : 9980638274
ಬೆಳ್ಮಣ್ : ದುರ್ಗಾಪ್ರಿಯ ಬಿಲ್ಡಿಂಗ್, ಪೇರಾಲ್‌ಪಾದೆ, ಬೆಳ್ಮಣ್, ಕಾರ್ಕಳ ✆ : 9187453634
ಗುರುಪುರ–ಕೈಕಂಬ : ಬಿ.ಎಸ್. ಟವರ್, ಕಿನ್ನಿಕಂಬಳ, ಗುರುಪುರ–ಕೈಕಂಬ ಮಂಗಳೂರು ✆ : 9449280184

### ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು


| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 394 ದಿನಗಳ ವರೆಗೆ | - | 6% |
| 13 ತಿಂಗಳು ಮೇಲ್ಪಟ್ಟು | - | 9% |

ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**FIXED DEPOSIT**
ಠೇವಣಿಗಳ ಮೇಲೆ **9.5%**
ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ ಬಡ್ಡಿ
ಆಕರ್ಷಕ ಬಡ್ಡಿದರಗಳು

ನಿಮ್ಮ ಹೂಡಿಕೆಗಳು
ಕೇವಲ **88** ತಿಂಗಳಲ್ಲಿ
**ದ್ವಿಗುಣವಾಗುವುದು**




**ಚಿನ್ನಾಭರಣ ಸಾಲ**
ಪ್ರತಿ ಗ್ರಾಂ ಗೆ ₹ **6,800/-**ರ ತನಕ

**ಲಕ್ಷಾಧೀಶ ಯೋಜನೆ**
ರೂ. **1,00,000/-**

ಪ್ರತಿ ತಿಂಗಳಿಗೆ ರೂ. 1,350 ತೊಡಗಿಸಿ 60 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 2,450 ತೊಡಗಿಸಿ 36 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 3,800 ತೊಡಗಿಸಿ 24 ತಿಂಗಳಲ್ಲಿ

## ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ದೇಣಿಗೆ




ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾ ವತಿಯಿಂದ ಕೂಡ್ಲು ಗೋಪಾಲಕೃಷ್ಣ ದೇವಸ್ಥಾನದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿದ್ದು, ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ರೂ. 50,000/– ದೇಣಿಗೆ ನೀಡಲಾಯಿತು. ಎರಡೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



## ಉಪನಯನ

ಶ್ರೀ ಅವಿನಾಶ್ ಮತ್ತು ಶ್ರೀಮತಿ ನಿಖಿಲಾ ದಂಪತಿಗಳ ಪುತ್ರ **ಚಿ| ಅವ್ಯಕ್ತ್**ನ ಬ್ರಹ್ಮೋಪದೇಶವು ತಾ. 22–02–2026ನೇ ರವಿವಾರ ಮಂಗಳೂರಿನ 'ಸಂಘನಿಕೇತನ'ದಲ್ಲಿ ನೆರವೇರಿತು.

❖ ❖ ❖

ಶ್ರೀ ಬೇರಿಕೆ ಸತೀಶ ಮತ್ತು ಶ್ರೀಮತಿ ಅಪೂರ್ವ ಪದ್ಮ ಇವರ ಪುತ್ರ **ಚಿ| ಆರಾಧ್ಯ**ನ ಬ್ರಹ್ಮೋಪದೇಶವು ತಾ. 22–02–2026ನೇ ರವಿವಾರ ಪಂಜ ಪೈಂದೋಡಿ 'ಶ್ರೀ ಸುಬ್ರಾಯ ಸ್ವಾಮಿ ಸಭಾಭವನ'ದಲ್ಲಿ ನಡೆಯಿತು.

❖ ❖ ❖

ಶ್ರೀಮತಿ ಶಾಲಿನಿ ಮತ್ತು ಶ್ರೀ ಎಚ್. ರಮೇಶ ರಾವ್ ಇವರ ಪುತ್ರ **ಚಿ| ವಿನಾಯಕ**ನ ಉಪನಯನ ತಾರೀಕು 8–2–2026ನೇ ರವಿವಾರ ಹೊಸಕೋಟೆಯ 'ಜನನಿ ನಿಲಯ'ದಲ್ಲಿ ನಡೆಯಿತು.

❖ ❖ ❖

ಶ್ರೀಮತಿ ದಿವ್ಯ ಹಾಗೂ ಎಲ್ಲೂರು ಲೋಹಿತ್ ವಾಸುದೇವ ರಾವ್ ಇವರ ಪುತ್ರ **ಚಿ| ಆರವ್ ಲೋಹಿತ್ ರಾವ್** ಇವನ ಬ್ರಹ್ಮೋಪದೇಶವು ತಾ. 22–02–2026ನೇ ರವಿವಾರದಂದು ಉಡುಪಿಯ 'ಶ್ರೀ ಶಾರದಾ ಮಂಟಪ'ದಲ್ಲಿ ನೆರವೇರಿತು.

❖ ❖ ❖

ಬೆಂಗಳೂರಿನ ಶ್ರೀಮತಿ ಶ್ರೀದೇವಿ ಮತ್ತು ಶ್ರೀ ನವೀನ ಕುಮಾರ ಪೂವಂದೂರು ಅವರ ಪುತ್ರ **ಚಿ| ತೇಜಸ್ವಿಕೃಷ್ಣ**ನ ಬ್ರಹ್ಮೋಪದೇಶ ತಾ. 22–02–2026ನೇ ರವಿವಾರ ಕೊಡಿಗೆಹಳ್ಳಿಯಲ್ಲಿರುವ 'ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸಭಾಭವನ'ದಲ್ಲಿ ನಡೆಯಿತು.

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

M.Devanand bhat
Mob: 9845644556
9663993883
Shobha Digital STUDIO
Belavai 08258-276177
Moodabidri 9901995655
Yedapadavu 0824-2256374
mdevanandbhat@gmail.com

NAVADURGA FINANCIALS
Estd 1998
SCAN ME TO KNOW MORE!!!

## 'ಶಿವಸದನ'ದಲ್ಲಿ ಹುಟ್ಟುಹಬ್ಬ ಆಚರಣೆ



ಪುತ್ತೂರಿನ 'ಶಿವಸದನ' ನಿವಾಸಿ ಶ್ರೀ ಕೇಶವ ನಾಯಕ್ ಇವರ 91ನೇ ಹುಟ್ಟುಹಬ್ಬವನ್ನು ಅವರ ಮಕ್ಕಳಾದ ಡಾ| ಲಾವಣ್ಯ, ಶ್ರೀ ದೀಪಕ್ ನಾಯಕ್, ಡಾ| ಪ್ರದೀಪ್ ನಾಯಕ್ ಮತ್ತು ಅವರ ಕುಟುಂಬದವರು, ಬಂಧು–ಬಾಂಧವರೊಂದಿಗೆ ಸಂತೋಷದಿಂದ ಆಚರಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾದಿಂದ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಸಮಾವೇಶಕ್ಕೆ ರೂ. 10,000–00 ದೇಣಿಗೆ



ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಸಮಾವೇಶ – 2026 ಇದರ ಊಟೋಪಚಾರದ ಜವಾಬ್ದಾರಿಯನ್ನು ವಹಿಸಿಕೊಂಡ, ಪುತ್ತೂರಿನ ಶ್ರೀ ಶಿವಬ್ರಾಹ್ಮಣ (ಸ್ಥಾನಿಕ) ಸಮಾಜ ಸೇವಾ ಸಂಘಕ್ಕೆ ಶ್ರೀ ಸುಬ್ರಹ್ಮಣ್ಯ ಸಭಾದಿಂದ ದೇಣಿಗೆಯಾಗಿ ರೂ. 10,000–00ವನ್ನು ನೀಡಲಾಯಿತು.

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)

Prop. : SUDHAKAR BELLE
: 9845193103/ 9481563103
KARAN DIGITAL STUDIO
Sadasukh Building
Nr. Postoffice, Padubidri - 574 111
Opp. Busstand
Belman
All Marriage & Other functions
Photography & Videography Available

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

ಪತ್ರಿಕೆಗೆ ಶುಭ ಬಯಸುವ –
ಕೆ. ಆರ್. ಉಪಾಧ್ಯಾಯ
ಮಂಗಳೂರು

# ಸ್ಮರಣೆಯೊಂದಿಗೆ ಸೇವೆ



**ಶ್ರೀಮತಿ ಸುಲೋಚನಾ ರಾವ್ ಅವರು ಅಗಲಿದ 13ನೇ ದಿನದಂದು ನೀಡಿದ ದೇಣಿಗೆ**


ಶ್ರೀಮತಿ ಸುಲೋಚನಾ ರಾವ್ ಅವರ ವೈಕುಂಠ ಸಮಾರಾಧನೆಯ ಸಂದರ್ಭದಲ್ಲಿ ಅವರ ಅಳಿಯ ಡಾ। ಗಿರಿಧರ ರಾವ್ ಮತ್ತು ಮಗಳು ಶ್ರೀಮತಿ ವೀಣಾ ಗಿರಿಧರ ಹಾಗೂ ಅವರ ಮೊಮ್ಮಕ್ಕಳು ಶಿವಸದನ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ವಸತಿ ನಿಲಯ, ಮುರ, ಪುತ್ತೂರು ಇಲ್ಲಿಗೆ ರೂ. 50,000/– ದೇಣಿಗೆ ನೀಡಿರುವರು.

ಹಲವು ವರ್ಷಗಳಿಂದ ಮೈಸೂರಿನಲ್ಲಿ ನೆಲೆಸಿದ್ದ ಶ್ರೀಮತಿ ಸುಲೋಚನಾ ರಾವ್ ಅವರು ಅಲ್ಪಕಾಲದ ಅನಾರೋಗ್ಯದಿಂದ ತಾರೀಕು 21–01–2026ರಂದು ಕೇರಳದ ಕಾಂಞಂಗಾಡ್‌ನ ತಮ್ಮ ಮಗಳು ಶ್ರೀಮತಿ ವೀಣಾ ರಾವ್ ಹಾಗೂ ಅಳಿಯ ಡಾ। ಗಿರಿಧರ ರಾವ್ ಅವರ ನಿವಾಸದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ನಂದಳಿಕೆ ಕೀರ್ತಿಶೇಷ ಭಾಸ್ಕರ್ ರಾವ್ ಅವರ ಪತ್ನಿ.

ಹಲವು ವರ್ಷಗಳ ಕಾಲ ಬೆಹರಿನ್ನಲ್ಲಿ ಉದ್ಯೋಗದಲ್ಲಿದ್ದ ಅವರು ತಮ್ಮ ನಿವೃತ್ತಿಯ ನಂತರ ಮೈಸೂರಿಗೆ ಬಂದು ತಮ್ಮ ಪುತ್ರಿ ಶ್ರೀಮತಿ ವೀಣಾ ಗಿರಿಧರ ರಾವ್ ಇವರ ಜತೆ ನೆಲೆಸಿದ್ದರು. ದೈವಭಕ್ತರೂ, ಆಧ್ಯಾತ್ಮಿಕ ಚಿಂತಕರೂ ಆಗಿದ್ದ ಅವರು ಮೈಸೂರಿನ ಹಲವಾರು ಭಜನಾ ತಂಡಗಳ ಜತೆ ಸಂಪರ್ಕ ಇರಿಸಿಕೊಂಡಿದ್ದು, ಸ್ವತಃ ತಾವೇ ಮಹಿಳಾ ಗುಂಪುಗಳಿಗೆ ಉಚಿತವಾಗಿ ಭಜನಾ ತರಬೇತಿ ನೀಡುತ್ತಿದ್ದರಲ್ಲದೆ ಮೈಸೂರಿನ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಮಹಿಳಾ ಘಟಕದ ಅಧ್ಯಕ್ಷರೂ ಆಗಿದ್ದು, ಹಲವು ಚಟುವಟಿಕೆಗಳನ್ನು ನಡೆಸುತ್ತ ಅತ್ಯಂತ ಕ್ರಿಯಾಶೀಲರಾಗಿದ್ದರು.

ಮೃತರು ಪುತ್ರಿ ವೀಣಾ, ಅಳಿಯ ಡಾ। ಗಿರಿಧರ ರಾವ್ ಮೊಮ್ಮಕ್ಕಳಾದ ಭರತ್, ಡಾ। ಶರತ್ ಹಾಗೂ ಡಾ। ಆರತಿ ರಾವ್ ಮತ್ತು ಅಪಾರ ಸಂಖ್ಯೆಯ ಬಂಧು–ಮಿತ್ರರನ್ನು ಅಗಲಿದ್ದಾರೆ. ಶ್ರೀ ಶಿವಸದನ ಚಾರಿಟೇಬಲ್ ಟ್ರಸ್ಟ್ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಸದ್ಗತಿ ಲಭಿಸಲೆಂದು ಹಾರೈಸುತ್ತದೆ.

*– ಶ್ರೀಮತಿ ಸುಮಂಗಲಾ ಪ್ರಭಾಕರ್*




ಶ್ರೀ ಪುರಂದರದಾಸ ಸಂಗೀತ ಕಲಾಮಂದಿರ ಕಾಸರಗೋಡು ಇವರು ಆಯೋಜಿಸಿದ ವಾರ್ಷಿಕ ಸಂಗೀತ ಆರಾಧನೋತ್ಸವದ ಸಂದರ್ಭದಲ್ಲಿ ವಿದುಷಿ ಶ್ರೀಮತಿ ರಾಧಾ ಮುರಳೀಧರ ಕಾಸರಗೋಡು ಇವರು ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಿದರು. ಇವರಿಗೆ ಪಕ್ಕವಾದ್ಯದಲ್ಲಿ ವಯಲಿನ್‌ನಲ್ಲಿ ಧನಶ್ರೀ ಶಬರಾಯ ಹಾಗೂ ಮೃದಂಗದಲ್ಲಿ ಶ್ರೀ ಶ್ರೀಧರ ರೈ ಸಹಕರಿಸಿದ್ದರು.

# ಅಪಾರಕೀರ್ತಿ ಗಳಿಸಿ



ಧರ್ಮಸ್ಥಳ, ಕನ್ಯಾಡಿ ಬಳ್ಳಮಂಜ ಶ್ರೀ ಸುಬ್ರಹ್ಮಣ್ಯ ರಾವ್ ಮತ್ತು ಶ್ರೀಮತಿ ಭುವನೇಶ್ವರಿ ಹಾಗೂ ಮಾಂಟ್ರಾಡಿ ಶ್ರೀ ಮೋಹನ್ ರಾವ್ ಮತ್ತು ಶ್ರೀಮತಿ ಕೆ. ಸವಿತ ಇವರ ಮೊಮ್ಮಗ, ಶ್ರೀ ಸುರೇಶ್ ಮತ್ತು ಶ್ರೀಮತಿ ಪೃಥ್ವಿ ಇವರ ಮಗ **ಶ್ರೀ ಸೃಜನ್ ಬಿ. ಎಸ್**. ಇವರು ಜನವರಿ ತಿಂಗಳಲ್ಲಿ ನಡೆದ ಜೆಇಇ ಮೈನ್ (JEE) ಪರೀಕ್ಷೆಯಲ್ಲಿ 99.62% ಪಡೆದಿರುತ್ತಾರೆ.

# 'ಶಿವಸದನ'ದಲ್ಲಿ ಶ್ರೀಮತಿ ಸರಸ್ವತಿ ಅಮ್ಮ ಇವರ 76ನೇ ವರ್ಷದ ಹುಟ್ಟುಹಬ್ಬ ಆಚರಣೆ



ಶಿವಸದನ ಹಿರಿಯ ನಾಗರಿಕ ಮತ್ತು ವಿಶೇಷಚೇತನರ ವಸತಿನಿಲಯ ಮುರ, ಪುತ್ತೂರು ಇಲ್ಲಿ ತಾರೀಕು 18–02–2026ನೇ ಬುಧವಾರ ಇಲ್ಲಿನ ನಿವಾಸಿ ಶ್ರೀಮತಿ ಸರಸ್ವತಿ ಅಮ್ಮ ಇವರ 76ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಅಖಿಲ ಕರ್ನಾಟಕ ಹಿರಿಯ ಸೇವಾ ಪ್ರತಿಷ್ಠಾನ, ಪುತ್ತೂರು ಘಟಕದ ವತಿಯಿಂದ ವೈವಿಧ್ಯಮಯ ಕಾರ್ಯಕ್ರಮ ನಡೆಯಿತು.

# ಶುಭವಿವಾಹ

ಶ್ರೀಮತಿ ವೀಣಾ ಜಿ. ರಾವ್ ಮತ್ತು ಡಾ। ಗಿರಿಧರ ರಾವ್ ಇವರ ಪುತ್ರಿ **ಚಿ। ಸೌ। ಡಾ। ಆರತಿ ರಾವ್** ಹಾಗೂ ಶ್ರೀಮತಿ ಕಲ್ಪನಾ ಮತ್ತು ಶ್ರೀ ಎಸ್. ವಿ. ವೆಂಕಟಕೃಷ್ಣನ್ ಇವರ ಪುತ್ರ **ಚಿ। ಕೈಲಾಶ್‌ಕೃಷ್ಣನ್** ಇವರ ವಿವಾಹ ತಾರೀಕು 5–12–2025ನೇ ಶುಕ್ರವಾರ ಮೈಸೂರಿನ 'ಯಶಸ್ವಿ ಸಭಾಭವನ'ದಲ್ಲಿ ನಡೆಯಿತು.

❖ ❖ ❖

ಶ್ರೀಮತಿ ಲಾವಣ್ಯ ಮತ್ತು ಶ್ರೀ ಐ. ಕೆ. ಸಂತೋಷ್ ರಾವ್ ಇವರ ಪುತ್ರಿ **ಚಿ। ಸೌ। ಪ್ರಣಮ್ಯಾ** ಹಾಗೂ ಶ್ರೀಮತಿ ಗೀತಾಂಜಲಿ ಮತ್ತು ಶ್ರೀ ಕೃಷ್ಣ ದುಮಾಲ್ ಇವರ ಪುತ್ರ **ಚಿ। ಅಕ್ಷಯ್** ಇವರ ವಿವಾಹ ತಾರೀಕು 15–2–2026ನೇ ರವಿವಾರ ಬೆಂಗಳೂರಿನ ಇಸ್ಕಾನ್ 'ದ್ವಾರಕಪುರಿ ಸಭಾಭವನ'ದಲ್ಲಿ ನಡೆಯಿತು.


ಪತ್ರಿಕೆಗೆ ಶುಭ ಬಯಸುವ–



**Dr. Jayalakshmi Devi**
**Dr. Jaganmohan, Smt. Asha Mohan**
**Akarsh M. Rao**
**Konchadi, Mangalore - 575 008**

**ರಾಮಾ ಅಟೋಮೊಬೈಲ್ಸ್**





ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ



**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

**PREETHIKA AUTOMOBILES**
✆ 2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**



Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

## ಸಂಶೋಧನಾ ನೈತಿಕತೆ ಸಮಿತಿಯ ಅಧ್ಯಕ್ಷರಾಗಿ ಡಾ| ವೈ. ರವೀಂದ್ರನಾಥ ರಾವ್



ಬ್ರಹ್ಮಾವರ ಎಸ್.ಎಂ.ಎಸ್. ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ| ವೈ. ರವೀಂದ್ರನಾಥ ರಾವ್ ಅವರು ಮಣಿಪಾಲ ಮಾಹೆ ವಿ.ವಿ.ಯ ದಂತವಿಜ್ಞಾನಗಳ ಕಾಲೇಜಿನ ಸಂಶೋಧನೆಗಳಿಗೆ ಸಂಬಂಧಿಸಿ ಸಾಂಸ್ಥಿಕ ನೈತಿಕತೆ ಸಮಿತಿಗೆ (ಐಇಸಿ) ಅಧ್ಯಕ್ಷರಾಗಿ ಮತ್ತು ಸಮಾಜ ವಿಜ್ಞಾನಿಯಾಗಿ ನೇಮಕಗೊಂಡಿದ್ದಾರೆ. ಹುದ್ದೆಯ ಅವಧಿ ಎರಡು ವರ್ಷಗಳಾಗಿದ್ದು, ಸಮಿತಿಯು ಐ.ಸಿ.ಎಂ.ಆರ್. ನಿಯಮಾವಳಿಗಳ ಮತ್ತು ಜೈವಿಕ ವೈದ್ಯಕೀಯ ಹಾಗೂ ಆರೋಗ್ಯ ಸಂಶೋಧನಾ ರಾಷ್ಟ್ರೀಯ ಮಾರ್ಗಸೂಚಿಗಳ ಪ್ರಕಾರ ಕಾರ್ಯನಿರ್ವಹಿಸುತ್ತದೆ.

ಡಾ| ರಾವ್ ಈ ಹಿಂದೆ ಮಣಿಪಾಲದ ಕೆ.ಎಂ.ಸಿ. ಮತ್ತು ಆಸ್ಪತ್ರೆಯ ಐ.ಇ.ಸಿ.ಯ ಸದಸ್ಯ ಮತ್ತು ಅಧ್ಯಕ್ಷರಾಗಿಯೂ ಆರು ವರ್ಷಗಳ (2017–2023) ಕಾಲ ಕಾರ್ಯನಿರ್ವಹಿಸಿದ್ದರು.

## ಶಿವಸದನದಲ್ಲಿ ಉಚಿತ ರಕ್ತ ವರ್ಗೀಕರಣ ಶಿಬಿರ




ಶಿವಸದನ ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿ ನಿಲಯ, ಮುರ, ಪುತ್ತೂರು ಇಲ್ಲಿ ಇಂದು ರೋಟರಿ ಕ್ಲಬ್ ಪುತ್ತೂರು, ಪ್ರಗತಿ ಆಸ್ಪತ್ರೆ ಮತ್ತು ರೋಟರಾಕ್ಟ್ ಕ್ಲಬ್ ಪುತ್ತೂರು ಇದರ ಸಹಯೋಗದೊಂದಿಗೆ ಡಾ| ರಾಮಕೃಷ್ಣ ರಾವ್ ಇವರ ನೇತೃತ್ವದಲ್ಲಿ ಹಿರಿಯ ನಾಗರಿಕರ, ಸಿಬ್ಬಂದಿ ವರ್ಗದವರ, ಮಕ್ಕಳ ವರ್ಗೀಕರಣ ಶಿಬಿರವು ಯಶಸ್ವಿಯಾಗಿ ಜರಗಿತು.

## ಅಳಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಎಲ್ಲೂರು ದಿ| ಕೃಷ್ಣಮೂರ್ತಿ ರಾವ್ ಇವರ ಧರ್ಮಪತ್ನಿ **ಶ್ರೀಮತಿ ವಿಶಾಲಾಕ್ಷಿ** (90) ತಾ. 14–02–2026ನೇ ಶನಿವಾರ ದೈವಾಧೀನರಾದರು. ಇವರು ಮೂವರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ಹೊಸಕೋಟೆ ಸದಾಶಿವ ರಾವ್** (58) ತಾ. 12–2–2026ನೇ ಗುರುವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

●●●



**ಎನ್. ಎಸ್. ಜಗದೀಶ ರಾವ್** (59) ತಾ. 12–2–2026ನೇ ಗುರುವಾರ ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ಶ್ರೀರಂಗಪಟ್ಟಣದ **ಬೆಳ್ಳಿಪಾಡಿ ಹರಿಶ್ಚಂದ್ರ ರಾವ್** (78) ತಾ. 5–2–2026ನೇ ಗುರುವಾರ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ಮೈಸೂರಿನ ಶ್ರೀ ಡಿ. ಎಲ್. ಚಂದ್ರಶೇಖರ ಮತ್ತು ಶ್ರೀಮತಿ ಕಬಕ ವಾಣಿ ಇವರ ಪುತ್ರ **ಎಸ್. ಅವಿನಾಶ್** (40) ತಾ. 24–01–2026ನೇ ಶನಿವಾರ ನಿಧನರಾದರು. ಅವರು ತಂದೆ, ತಾಯಿ, ಓರ್ವ ತಂಗಿ, ಪತ್ನಿ, ಇಬ್ಬರು ಪುತ್ರರು, ಸೋದರ ಮಾವ ಕಬಕ ಶ್ರೀ ಸತೀಶ್ ರಾವ್, ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಕರ್ನಾಟಕ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದ ಅವರು ಕೇವಲ ಆರು ವರುಷದಲ್ಲಿ ಎರಡು ಸಲ ಭಡ್ತಿ ಪಡೆದು ಮ್ಯಾನೇಜರ್ ಆಗಿ ಒಟ್ಟು 18 ವರ್ಷ ಸೇವೆ ಸಲ್ಲಿಸಿದ್ದರು. ಇತ್ತೀಚೆಗೆ ಮಂಗಳೂರಿಗೆ ವರ್ಗಾವಣೆ ಹೊಂದಿದ್ದರು.




ದಿ| ನಂದಳಿಕೆ ಭಾಸ್ಕರ ರಾವ್ ಅವರ ಪತ್ನಿ **ಶ್ರೀಮತಿ ಸುಲೋಚನಾ ರಾವ್ ಮೈಸೂರು** (86) ತಾರೀಕು 21–01–2026ನೇ ಬುಧವಾರ ಕೇರಳದ ಕಾಂಞಂಗಾಡಿನಲ್ಲಿ ನಿಧನರಾದರು. ಹಲವು ವರ್ಷಗಳ ಕಾಲ ಬೆಹರಿನ್ನಲ್ಲಿ ಉದ್ಯೋಗದಲ್ಲಿದ್ದ ಅವರು ತಮ್ಮ ನಿವೃತ್ತಿಯ ನಂತರ ಮೈಸೂರಿನಲ್ಲಿ ನೆಲೆಸಿದ್ದರು. ದೈವಭಕ್ತರೂ, ಆಧ್ಯಾತ್ಮಿಕ ಚಿಂತಕರೂ ಆಗಿದ್ದ ಅವರು ಮೈಸೂರಿನ ಹಲವಾರು ಭಜನಾ ತಂಡಗಳ ಜತೆ ಸಂಪರ್ಕ ಇರಿಸಿಕೊಂಡಿದ್ದು, ಸ್ವತಃ ತಾವೇ ಮಹಿಳಾ ಗುಂಪುಗಳಿಗೆ ಉಚಿತವಾಗಿ ಭಜನಾ ತರಬೇತಿ ನೀಡುತ್ತಿದ್ದರಲ್ಲದೆ, ಮೈಸೂರಿನ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಮಹಿಳಾ ಘಟಕದ ಅಧ್ಯಕ್ಷರೂ ಆಗಿದ್ದು ಹಲವು ಚಟುವಟಿಕೆಗಳನ್ನು ನಡೆಸುತ್ತ ಅತ್ಯಂತ ಕ್ರಿಯಾಶೀಲರಾಗಿದ್ದರು. ಮೃತರು ಪುತ್ರಿ ವೀಣಾ, ಅಳಿಯ ಡಾ| ಗಿರಿಧರ ರಾವ್ ಮೊಮ್ಮಕ್ಕಳಾದ ಭರತ್, ಡಾ| ಶರತ್ ಹಾಗೂ ಡಾ| ಆರತಿ ರಾವ್ ಮತ್ತು ಬಂಧು–ಮಿತ್ರರನ್ನು ಅಗಲಿದ್ದಾರೆ.

●●●



ಕೃಷಿಕ್ಷೇತ್ರ, ವ್ಯವಹಾರಕ್ಷೇತ್ರ ಮತ್ತು ಧಾರ್ಮಿಕಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ **ಅಡೂರು ಚರಕಂಡ ಸಂಜೀವ ರಾವ್** (90) ತಾ. 24–01–2026ನೇ ಶನಿವಾರ ನಿಧನರಾದರು. ಅವರು ಪತ್ನಿ, ಮಕ್ಕಳು, ಮೊಮ್ಮಕ್ಕಳನ್ನು ಅಗಲಿದ್ದಾರೆ.

●●●




**ಮಸ್ಕಿಬೈಲು ಕೃಷ್ಣಮೂರ್ತಿ ರಾವ್** (85) ತಾ. 22–01–2026ನೇ ಗುರುವಾರ ಉಡುಪಿಯಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ.

●●●



ಬನ್ನಾಡಿ ವಡ್ಡರ್ಸೆ ಸದಾನಂದ ರಾವ್ ಇವರ ಪುತ್ರ **ಮಂಜುನಾಥ ರಾವ್** (61) ಇವರು ತಾ. 23–2–2026ನೇ ಸೋಮವಾರ ನಿಧನರಾದರು. ಇವರು ತಂದೆ, ತಾಯಿ, ಪತ್ನಿ, ಓರ್ವ ಪುತ್ರನನ್ನು ಅಗಲಿದ್ದಾರೆ.

●●●



**ಬೆಳ್ಮಣ್ ಕೊಟ್ಟಿಂಜ ಶ್ರೀ ನಾರಾಯಣ ರಾವ್** (82) ತಾ. 19–2–2026ನೇ ಗುರುವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

WC EVENT PLANNERS +91 98445 51244
Prop: Somashekhar
Mob: 9844551244
WONDER CREATION
Decor & Event planners
Our Services :-
❖ Corporate Events
❖ All Types Of Stage Decoration
❖ Sounds And Lights
❖ Led Wall Rentals
❖ Selfie Booth Concept
❖ Shamiyana/Tint Sheet/Plat Form Chairs/Round Table etc....
❖ Photography & Videography
2T-145-3A, Kulai Gudde Road, Kulai, Surathkal



Freelance Makeup & Hairstyle Artistry
Swapna_rao_makeoverartistry
BRIDAL / PRE / POST WEDDING FUNCTIONS / OTHER PERSONAL EVENTS & PARTIES
Rental Jewellery / Saree Pre-pleating Service available
For Bookings and Enquiries
Swapna Vallish : 9972465209 / 7892235761

Anuraga Matrimony ®
Exclusive Website for Brahmin Community
ಸ್ಮಾರ್ತ, ವೈಷ್ಣವ, ಶ್ರೀವೈಷ್ಣವ ಬ್ರಾಹ್ಮಣ ವಧು–ವರಾನ್ವೇಷಣೆಗಾಗಿ
www.anuragamatrimony.com
ಉಚಿತ ರಿಜಿಸ್ಟ್ರೇಶನ್
GET IT ON Google Play
Sudhashree
ಅನುರಾಗ ಮ್ಯಾಟ್ರಿಮೊನಿ
✓ ಮನೆಯಲ್ಲೇ ಕುಳಿತು ವಧು–ವರಾನ್ವೇಷಣೆ ಮಾಡಲು ಒಂದು ಸುವರ್ಣಾವಕಾಶ.
✓ ಸ್ಮಾರ್ತ–ಸ್ಥಾನಿಕ ಉಪಪಂಗಡದ ವಧು–ವರರ ಪ್ರತ್ಯೇಕ ಅನ್ವೇಷಣೆ ಸಾಧ್ಯ.
✓ ಎಲ್ಲಾ ವಯಸ್ಸು, ವಿದ್ಯಾರ್ಹತೆ, ಉದ್ಯೋಗಸ್ಥ ಹಾಗೂ ವಿಚ್ಛೇದಿತ ವಧು–ವರರಿಗೂ ಸದಸ್ಯತ್ವಕ್ಕೆ ಅವಕಾಶವಿದೆ.
✓ ವಧು–ವರರ ವಿದ್ಯಾರ್ಹತೆ, ಉದ್ಯೋಗ, ವಾಸಸ್ಥಳ ಹಾಗೂ ಇನ್ನಿತರೆ ವಿವರಗಳಿಂದ ವಿಂಗಡಿಸಬಹುದು.



● ಬೆಂಗಳೂರು ● ಮೈಸೂರು ● ಉಡುಪಿ ● ಹುಬ್ಬಳ್ಳಿ
1ನೇ ಮಹಡಿ, ಕೆನರಾ ಟವರ್, ಮಿಷನ್ ಆಸ್ಪತ್ರೆ ರಸ್ತೆ
ಉಡುಪಿ ಮೊಬೈಲ್ : 8105458755

# ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ ನವೀಕರಿಸಲಾದ ಅಗ್ರಶಾಲೆ 'ಸ್ಥಾನಿಕ ಬ್ರಾಹ್ಮಣ ಸಭಾಭವನ' ಶ್ರೀ ಕ್ಷೇತ್ರಕ್ಕೆ ಸಮರ್ಪಣೆ

ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ ನವೀಕರಿಸಲಾದ ಅಗ್ರಶಾಲೆಯನ್ನು 'ಸ್ಥಾನಿಕ ಬ್ರಾಹ್ಮಣ ಸಭಾಭವನ'ವೆಂಬ ಹೆಸರಿನಲ್ಲಿ (ಫೆಬ್ರವರಿ 21) ಶ್ರೀ ಕ್ಷೇತ್ರಕ್ಕೆ ಸಮರ್ಪಿಸಲಾಯಿತು. ಶ್ರೀ ಕ್ಷೇತ್ರ ತಂತ್ರಿವರ್ಯರಾದ ಬ್ರಹ್ಮಶ್ರೀ ವಿಷ್ಣು ಆಸ್ರ, ಉಳಿಯ ಇವರ ನೇತೃತ್ವದಲ್ಲಿ ವಾಸ್ತು ಹೋಮ, ವಾಸ್ತು ಬಲಿ ಮುಂತಾದ ಧಾರ್ಮಿಕ ಕಾರ್ಯಗಳು ವಿದ್ಯುಕ್ತವಾಗಿ ನಡೆದು ಮರುದಿನ ಬೆಳಗ್ಗೆ ಶ್ರೀ ಗಣಪತಿ ಹೋಮ ನಡೆಯಿತು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಸಭಾದ ಅಧ್ಯಕ್ಷರು ಮತ್ತು ಶ್ರೀ ಕ್ಷೇತ್ರದ ಆನುವಂಶಿಕ ಮೊಕ್ತೇಸರರೂ ಆದ ಶ್ರೀ ಕೆ. ಜಿ. ಶ್ಯಾನುಭಾಗ್ ಅಧ್ಯಕ್ಷತೆ ವಹಿಸಿದ್ದರು. ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಸುಜ್ಞಾನಿ ಶ್ಯಾನುಭಾಗ್, ಹಿರಿಯ ಸದಸ್ಯರಾದ ಶ್ರೀ ಶುಭಕರ ಶ್ಯಾನುಭಾಗ್ ಮನ್ನಿಪ್ಪಾಡಿ ಇವರ ಉಪಸ್ಥಿತಿಯಲ್ಲಿ ತಂತ್ರಿವರ್ಯರಾದ ಬ್ರಹ್ಮಶ್ರೀ ವಿಷ್ಣು ಆಸ್ರ ಇವರು ದೀಪ ಬೆಳಗಿಸಿ ಉದ್ಘಾಟಿಸಿ ಆಶೀರ್ವಚನ ಮಾಡಿದರು.

ಸಭಾಭವನ ನಿರ್ಮಾಣದ ವಿವಿಧ ಹಂತಗಳಿಗೆ ಸಂಪೂರ್ಣ ಸೇವಾರೂಪದಲ್ಲಿ ಸಹಕರಿಸಿದ ಪ್ರಾಜೆಕ್ಟ್ ಇಂಜಿನಿಯರ್ ಮತ್ತು ನಮ್ಮ ಬಂಧುವೂ ಆದ ಶ್ರೀ ಪ್ರಶಾಂತ ಬಜಕೂಡ್ಲು ಇವರನ್ನು ಶಾಲು ಹೊದಿಸಿ ಫಲಪುಷ್ಪ, ಫಲಕಗಳನ್ನಿತ್ತು ಆದರಪೂರ್ವಕವಾಗಿ ಅಭಿನಂದಿಸಲಾಯಿತು. ನಿರ್ಮಾಣ ಕಾಮಗಾರಿಯನ್ನು ಶರವೇಗದಲ್ಲಿ ನಿರ್ವಹಿಸಿದ ವಿವಿಧ ಕೆಲಸಗಳ ಮೇಸ್ತ್ರಿಯವರನ್ನು ಆಚಾರ ಪ್ರಕಾರ ಗೌರವಿಸಲಾಯಿತು. ಅಂತೆಯೇ ಮೊಕ್ತೇಸರರ ಅಧೀನದಲ್ಲಿ ಇರುವ ಕೂಡ್ಲಿನ ಮೂರೂ ದೇವಸ್ಥಾನಗಳ ಪ್ರಧಾನ ಅರ್ಚಕರನ್ನು ಮತ್ತು ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಿಬ್ಬಂದಿ ವರ್ಗದವರನ್ನೂ ಆಚಾರಪೂರ್ವಕವಾಗಿ ಗೌರವಿಸಲಾಯಿತು.

ಸಮಾರಂಭದ ಅಂಗವಾಗಿ ಮಹಿಳಾ ಘಟಕದ ಸದಸ್ಯೆಯರಿಂದ ದೇವತಾ ಸ್ತುತಿ, ಶ್ರೀ ವೇಣುಗೋಪಾಲ ಶ್ಯಾನುಭಾಗ್, ಶ್ರೀಮತಿ ರಾಧಾ ಮುರಳೀಧರ ಕಾಸರಗೋಡು, ಶ್ರೀಮತಿ ರಾಜೇಶ್ವರಿ ಭಟ್ (ದೆಹಲಿ) ಡಾ. ಶಶಿಧರ ರಾವ್ ಕಾಂಞಂಗಾಡು ಮತ್ತು ಬಳಗದವರು ಪ್ರಸ್ತುತಪಡಿಸಿದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವು ನಡೆಯಿತು.




ಕನಿಷ್ಠ ಅವಧಿಯಲ್ಲಿ ಪೂರ್ಣಗೊಂಡಿರುವ ವಿಶಾಲ, ಸುಂದರವಾದ 740 ಚದರಡಿಯ ಪಾಕಶಾಲೆಯನ್ನೊಳಗೊಂಡ 3230 ಚದರಡಿಯ ಸಭಾಭವನವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಸಂಪೂರ್ಣವಾಗಿಯೂ ಸ್ಥಾನಿಕ ಸಮಾಜ ಬಾಂಧವರ ಉದಾರ ಧನಸಹಾಯದಿಂದ ಕೇವಲ 100 ದಿನಗಳಲ್ಲಿ ಈ ನಿರ್ಮಾಣವು ಪೂರ್ಣಗೊಂಡಿದೆ. ಸಹಕರಿಸಿದ ಎಲ್ಲ ಸಮಾಜ ಬಾಂಧವರಿಗೂ ಅನಂತಾನಂತ ಧನ್ಯವಾದಗಳನ್ನು ಸಮರ್ಪಿಸಲಾಯಿತು.

ಸಭಾಭವನ ನಿರ್ಮಾಣ ಉಪಸಮಿತಿಯ ಸಂಚಾಲಕರಾದ ಡಾ. ಸತ್ಯನಾಥ್ ಸ್ವಾಗತಿಸಿ ಕಾರ್ಯದರ್ಶಿ ಶ್ರೀ ವಸಂತರಾಜ ವಂದಿಸಿದರು. ಶ್ರೀಮತಿ ಸುಮಂಗಲಾ ಮನೋಹರ್ ಮತ್ತು ಶ್ರೀಮತಿ ಸುಮಾ ಪ್ರಸಾದ್ ಪ್ರಾರ್ಥನೆ ಹಾಡಿ, ಕೋಶಾಧಿಕಾರಿ ಶ್ರೀ ಮನೋಹರ ಮತ್ತು ಉಪಾಧ್ಯಕ್ಷ ಶ್ರೀ ರಾಜೇಂದ್ರ ಬಜಕೂಡ್ಲು ಇವರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು.

# ಯಶಸ್ವಿ ಬದುಕಿಗೆ ಹತ್ತು ಸಲಹೆಗಳು

1. **ಸ್ವಯಂ ಅರಿವು :** ನಿಮ್ಮ ಪ್ರತಿಭೆ, ಆಸಕ್ತಿ ಮತ್ತು ಮೌಲ್ಯಗಳನ್ನು ಅರ್ಥಮಾಡಿಕೊಳ್ಳಬೇಕು.
2. **ಸೇವೆ :** ಸಮಾಜಕ್ಕೆ ಅಥವಾ ಇತರರಿಗೆ ನಿಮ್ಮ ಕೈಲಾದ ಸಹಾಯವನ್ನು ಮಾಡಬೇಕು.
3. **ನಿರಂತರ ಕಲಿಕೆ :** ಪ್ರತಿದಿನ ಹೊಸ ವಿಷಯಗಳನ್ನು ಕಲಿಯುತ್ತಾ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು.
4. **ಸಂತೋಷ :** ಸಣ್ಣ ವಿಷಯಗಳಲ್ಲಿ ತೃಪ್ತಿಯನ್ನು ಕಾಣುವುದು ಮತ್ತು ನೆಮ್ಮದಿಯಾಗಿರಬೇಕು.

**ಇದನ್ನು ಸಾಧಿಸುವುದು ಹೇಗೆ?**

5. **ಗುರಿಯನ್ನು ನಿಗದಿಪಡಿಸಿ :** ನೀವು ಜೀವನದಲ್ಲಿ ಏನು ಸಾಧಿಸಲು ಬಯಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ದಾಖಲಿಸಿ. ನಿಮಗೆ ಇಷ್ಟವಿರುವ ಕೆಲಸ, ನಿಮ್ಮ ಕೌಶಲ್ಯ, ಜಗತ್ತಿಗೆ ಬೇಕಾದ ಕೆಲಸ ಮತ್ತು ಅದರಿಂದ ಸಿಗುವ ಆದಾಯ ಈ ನಾಲ್ಕು ಸಂಗತಿಗಳು ಒಂದಾಗುವ ಜಾಗವನ್ನು ಗುರುತಿಸಿ.
6. **ಸಣ್ಣ ಸಣ್ಣ ಹೆಜ್ಜೆಗಳನ್ನಿಡಿ :** ದೊಡ್ಡ ಗುರಿಯನ್ನು ಚಿಕ್ಕ ಚಿಕ್ಕ ಕಾರ್ಯಗಳಾಗಿ ವಿಂಗಡಿಸುತ್ತಾ, ಪ್ರತಿದಿನ ಒಂದೊಂದೇ ಹೆಜ್ಜೆ ಮುಂದುವರಿಯಿರಿ.

**ಅಡೆತಡೆಗಳನ್ನು ನಿವಾರಿಸುವುದು ಹೇಗೆ?**

ಜೀವನದಲ್ಲಿ ಬರುವ ಕಷ್ಟಗಳು ಸಹಜ.
ಅವುಗಳನ್ನು ಎದುರಿಸಲು ಕೆಲವು ಸಲಹೆಗಳು

7. **ಸಕಾರಾತ್ಮಕ ಮನೋಭಾವ :** ಸೋಲುಗಳನ್ನು ಪಾಠಗಳಾಗಿ ನೋಡಿ, ಅವಮಾನಗಳನ್ನಲ್ಲ.
8. **ಸ್ಥಿರತೆ :** ಫಲಿತಾಂಶಕ್ಕಾಗಿ ಆತುರಪಡಬೇಡಿ. ನಿರಂತರ ಪ್ರಯತ್ನವೇ ಯಶಸ್ಸಿನ ಮೂಲ ಮಂತ್ರ.
9. **ಆರೋಗ್ಯಕ್ಕೆ ಆದ್ಯತೆ :** ದೈಹಿಕ ಮತ್ತು ಮಾನಸಿಕ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ಯಾವುದೇ ಅಡೆತಡೆಯನ್ನು ಸಮರ್ಥವಾಗಿ ಎದುರಿಸಲು ಸಾಧ್ಯ.
10. **ನಕಾರಾತ್ಮಕತೆ :** ನಿಮ್ಮ ಉತ್ಸಾಹವನ್ನು ಕುಗ್ಗಿಸುವ ವ್ಯಕ್ತಿಗಳಿಂದ ಮತ್ತು ಆಲೋಚನೆಗಳಿಂದ ದೂರವಿರಿ.

**ಪ್ರಮುಖ ಸಲಹೆಗಳು**

***'ಪ್ರಯತ್ನಿಸುವವನಿಗೆ ಸೋಲಿಲ್ಲ, ಪ್ರಯತ್ನವನ್ನೇ ಬಿಟ್ಟವನಿಗೆ ಗೆಲುವಿಲ್ಲ'. ಯಾವುದೇ ಅಡೆತಡೆಗಳು ಎದುರಾದಾಗ, ನೀವು ಆ ಗುರಿಯನ್ನು ಏಕೆ ಪ್ರಾರಂಭಿಸಿದ್ದೀರಿ ಎಂದು ನೆನಪಿಸಿಕೊಳ್ಳಿ. ಅದು ನಿಮಗೆ ಮುನ್ನಡೆಯಲು ಶಕ್ತಿಯನ್ನು ತುಂಬುತ್ತದೆ.***

## ಲಯನ್ಸ್ ಕ್ಲಬ್ ಮಂಗಳೂರು ಕರಾವಳಿ ಮತ್ತು ಲಿಯೋ ಕ್ಲಬ್ ಮಂಗಳೂರು Suiet ಇದರ ಸದಸ್ಯರಿಂದ ಶಿವಸದನಕ್ಕೆ ದೇಣಿಗೆ



ಲಯನ್ಸ್ ಕ್ಲಬ್ ಮಂಗಳೂರು ಕರಾವಳಿ ಮತ್ತು ಲಿಯೋ ಕ್ಲಬ್ ಮಂಗಳೂರು **Suiet** ಇದರ ಸದಸ್ಯರು ಅವರ ಝೋನ್ ಸೋಶಿಯಲ್ ಮೀಟಿಂಗ್ ಸಂದರ್ಭದಲ್ಲಿ ಶಿವಸದನ ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿ ನಿಲಯ, ಮುರ, ಪುತ್ತೂರು ಇಲ್ಲಿಗೆ ರೂ. **50,000/-** ದೇಣಿಗೆ ನೀಡಿರುತ್ತಾರೆ. ಸಹಕಾರ ನೀಡಿದ ನಮ್ಮವರೇ ಆದ ಕ್ಲಬ್‌ನ ಕಾರ್ಯದರ್ಶಿ ಶ್ರೀ ಪಿ. ಶ್ರೀಕಾಂತ್ ರಾವ್, ಕೋಶಾಧಿಕಾರಿ ಶ್ರೀ ಸೂರ್ಯನಾರಾಯಣ ಇವರಿಗೆ ಶಿವಸದನ ಚಾರಿಟೇಬಲ್ ಟ್ರಸ್ಟ್‌ನ ಪರವಾಗಿ ಅನಂತ ಧನ್ಯವಾದಗಳು.

– ಶ್ರೀಮತಿ ಸುಮಂಗಲಾ ಪ್ರಭಾಕರ್





TO KNOW MORE CALL

8882 777 444

98807 42159 | 98450 84866 | 96115 31026

sales@landtrades.in | www.landtrades.in

RERA NO : PRM/KA/RERA/1257/334/PR/100822/005149

SHIVABAGH
Kadri


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3

*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.